ಬೆಂಗಳೂರಾಗ ಅಂಥ ಕೆಲ್ಸ ಮಾಡ್ಯಾಳೋ ಇಲ್ಲೋ ಗೊತ್ತಿಲ್ಲ... ಆದ್ರ ಮಗ, ಸೊಸಿ ಬಗ್ಗೆ ಅನುಮಾನ ಮೂಡಿಸಿಕೊಂಡು ಮನ್ಯಾಗ ತೊಂದ್ರೆ ಕೊಡಾಕ ಕುಂತಾನ...' ಅಂತ ಇವರಿಬ್ರು ಶೇಕ್ರ ಹತ್ತಿರಕ ಬರೋದನ್ನ ನೋಡಿ ಗಪ್ಪನಾಗಿ ಬಡಬಡ ಉಡ ಹಿಡದಾಡಕ ಮುಂದಾದ್ರು. ಶೇಕ್ರ ಇವರಿಬ್ರ ಹತ್ತಿರಕ ಬಂದವನು ಕೇಳಿಯೂ ಕೇಳಿಸಿಕೊಳ್ಳಲಾರದಂಗ ಬೇರೆಕಡೆ ದಾರಿ ದಡದಡ ತುಳಿದ. ದಾರ್‍ಯಾಗ ಒಂಟೆಂಗ ಹೊಂಟಿದ್ದ ಹಚ್ಚನ ಊಸರವಳ್ಳಿನ ದಿಟ್ಟಿಸಿ ನೋಡಿದ. ಅಲ್ಲಿದ್ದ ಊಸರವಳ್ಳಿ ಹೊಟ್ಟಿ ಉಬ್ಬಿಸಿ ಕೊಂಡು ರಾಗಪ್ಪ ನಡದಂಗ ಜಿಕ್ಕೋತ ನಡಿತಿತ್ತು. ಏಕಾ ನೋಡಿದವನೇ ಅದನ್ನ ಸಿಟ್ಟಲೆ ರಪ್ಪನ ಬಡದ. ಅದು ಪೆಕಪೆಕ ಒದ್ದಾಡಿ, ಮೈ ಉಬ್ಬುಬ್ಬಿಸಿ ಹದಿನಾರು ಬಣ್ಣ ಬದ್ಲಿಮಾಡ್ತು. ರಾಗಪ್ಪನ ಮೇಲೆ ಇನ್ನಂದಿಷ್ಟು ಸಿಟ್ಟುಬಂದು ಇನ್ನೂ ಒಂದೆರೆಡು ಬಿಟ್ಟ. ಕೊನಿಗೆ ಎರೆ ಮಣ್ಣಿನ್ಯಾಗ ಮಣ್ಣಿನ ಬಣ್ಣಾಗಿ ಸತ್ತು ಹೋದಂಗ ಮಾಡ್ತು. ಅದನ್ನ ಬಟ್ಟ್ಯಾಗ ಸುತ್ತಿಕೊಂಡು ಮುಂದಕ ಬಂದ.

ಆಕಡೆ ಡೂಗೀರ, ಬಂಡೆಪ್ಪ ಆ ಜಾಲ್ಯಾಗ ಓಡಿಸ್ಯಾಡಿದ ಉಡ ತನ್ನ ಎದ್ರಿಗಿದ್ದ ಸಣ್ಣ ಕಾಲುವೆಯಂತ ಎರಿಬಿಡಿಕ್ಯಾಕ ತಾರಮಾರ ಹೊಕ್ಕಾಡುವುದನ್ನ ನೋಡಿದ. ನೋಡಿದವನು ಬಾಲ ಹಿಡಿದು ಗಟ್ಟ ನೆಲಕ ರಪ್‌ಅಂತ ಬಡುದು ಆಗಿಂದಾಗಲೇ ಉಡದ ನಾಲಿಗಿನ ಕೆಂಪಗ ಹೊರ ಚೆಲ್ಲಿಸಿದ. ಊಸರವಳ್ಳಿ ಜತಿಗೆ ಉಡನ ಅದೇ ಬಟ್ಟ್ಯಾಗ ಸುತ್ತಿಕೊಂಡು ಮನಿಗೆ ಬಂದ. ಮನಿಗೆ ಹೋಗತಿಗೆ ಸಂಜೆ ಆಗಿತ್ತು. ರಾಗಪ್ಪ ಅವತ್ತು ಪುಣ್ಯಕ ಅದೆಲ್ಲಿಗೋ ಹೋಗಿದ್ದ. 'ಏಯ್... ಇವತ್ತು ಅಪ್ಪಗ ಉಡ ತಂದಿನಿ... ಬಿಸಿಬಿಸಿ ರೊಟ್ಟಿಸುಡು, ಹಂಗ ನಮ್ಮಿಬ್ರಿಗೆ ಸಪ್ರೇಟು ತತ್ತಿಸಾರು ಮಾಡು...' ಅಂತ ಈಳಿಗಿ ತಗಂದು ಉಡದ ಬಾಲನ ಪಳಪಳ ಕೊಯ್ದು, ಉಡದ ಹೊಟ್ಟನ, ಊಸರವಳ್ಳಿ ಹೊಟ್ಟನ ಪಿಂಜಿಗೆ ಗೊತ್ತಾಗದಂಗ ನಿಲಾ ಸೀಳಾಕ ಮುಂದಾದ. ಬಟ್ಟ್ಯಾಗಿನ ಊಸರವಳ್ಳಿ ಇನ್ನೂ ಸತ್ತಿರಲಿಲ್ಲ. ಹೊಟ್ಟೆ ಟುಸ್ಸಂತ ಉಬ್ಬಿಸುತಿತ್ತು. ಉಡದ ಕಾಲು ತುಂಡಾಕಿ, ಊಸುರವಳ್ಳಿಯ ಹೊಟ್ಟ್ಯಾಗಿನ ವಿಷದ ಕಸ್ರಾಕಿ ಎಲ್ಲಾ ತುಂಡು ಒಂದೇತರ ಸೇರಿಸಿ ಪಿಂಜಿಗೆ ಕೊಟ್ಟ. ಪಿಂಜಿ ಒಲಿಮುಂದ ಕೂತು ತತ್ತಿ ಸಾರಿಂದು, ಉಡ ಸಾರಿಂದು ಬ್ಯಾರಿಬ್ಯಾರಿದಂತ ಮಾಡಿಟ್ಲು.

ರಾಗಪ್ಪ ಎಲ್ಲಿಗೋ ಹೋದಾತ ಬರ್‍ರಂತ ಬಂದವನೇ ಮಂಚಕ ನಾಲ್ಕುಕಾಲು ಕರ್‍ರಂತ ಕಿಸಿಯುವಂಗ ದಬ್ಬಂತ ಕೂತು ಪಿಂಜಿಗೆ ಊಟಕ್ಕ ಕೊಡಂದ. ಗಂಡ ಉಡ ತಂದಿದ್ದನ್ನ, ತಾನು ಅಡಿಗಿ ಮಾಡಿದ್ದನ್ನ ಮಾವಗ ಹೇಳಿ ಬಿಸಿಬಿಸಿ ರೊಟ್ಟಿ ಜತಿಗೆ ಸುಡುಸುಡು ತುಂಡುಗಳನ್ನ ಹಾಕಿಕೊಟ್ಲು. 'ಮನ್ಯಾಗ ಖಾಲಿಕುಂತು ನಿನ್‌ಮುಂದ ಏನ್ ಕಿಸ್ತು ಮಾಡ್ತಾನ... ಇದನ್ನಾದ್ರ ಮಾಡ್ಯಾನಲ ಕೈಲೇ ಆಗಲಾರದ್ದು...' ಅಂತ ಶೇಕ್ರನ ಊಟಕ್ಕ ಕರಿಲಾರದ ಕಪಕಪ ತಿಂದು ಡೇಗಿದ. ಆಮ್ಯಾಲ ಕಳ್‌ದ್ಯಾವಗ ಒಂದಿಷ್ಟು ಉಡದ ಬ್ಯಾಟಿ ಕೊಟ್ಟುಬಂದು ಮಂಚಕ ಏಕಾ ಉಳ್ಳಿದ. ಕಳ್‌ದ್ಯಾವ ಉಡದ ಬ್ಯಾಟಿ ಕೊಟ್ಟದ್ದನ್ನ ತಣ್ಣಗಾಕ ಬಿಡಬಾರದಂತ ಬ್ಯಾಟಿನ ಸರಿಗೆ ಮೂಸಲಾರದ ತಿನ್ನಾಕ ಕೂತವನು ಹಂಗ ದಡ್ಡಿಗೆ ಬರೋರಕಡೆ ಕೆಟ್ ಕಣ್ಣಿಟ್ಟದ್ದ. ತಿಂತತಿಂತಾ ಕಣ್ಣು ಮಸುಮಸುಕಾಗ ತೊಡಗಿರಬೇಕು ಹಂಗ ಕುಂತಲ್ಲೇ ಉಳ್ಳಿದ.

ರಾಗಪ್ಪಗ ಇನ್ನೂ ನಿದ್ದಿ ಬಂದಿರಲಿಲ್ಲ. ಹೊಟ್ಟಿ ಮುರು ಮುರುದಂಗಾಗಿ ಮಂಚಕ ಉಳ್ಳಾಡತೊಡಗಿದಾತ ಮೆಲ್ಲಕ ನಿದ್ದಿಗೆ ಜಾರಿದ. ಶೇಕ್ರಗ ಸಿಟ್ಟು ಒತ್ತರಿಸಿ ಬಂದ್ರು ತಡಕೊಂಡು, ಅಪ್ಪನಂಬೋನು ಮಲಿಗಿದ್ನಲಾ ನಡೆಂತ ಪಿಂಜಿ ಮುಂದ ತತ್ತಿ ಸಾರಿನ ಊಟಕ್ಕ ಕೂತ. ಉಡದ ಬ್ಯಾಟಿನ ಶೇಕ್ರ ಉಣ್ಣುತಿದ್ರೂ ಅದನ್ನ ಒಟ್ಟ ಮುಟ್ಟಲಿಲ್ಲ. ಕೊನಿಗೆ ಇಬ್ರು ತತ್ತಿಸಾರು ಉಂಡು ಮಲಿಗಿದ್ರು.

ಶೇಕ್ರ ತತ್ತಿಸಾರು ಊಟ ಮಾಡಿದ ಖುಷಿಗೆ ಸೀದಾ ಅಲ್ಲಿಗೆ ಕೈ ಹಾಕಿ ಪಸಕ್ಕನ ಕೈ ಎಳಕೊಂಡ. ಪಿಂಜಿ ಮೇಲೆ ಸಿಟ್ಟುಬಂದು 'ಎಲ್ಲ್ಯಾರ ಕೂತು ಕ್ಲೀನ್ ಮಾಡಿಕೊಳ್ಳಾಕ ಏನಾಗೇದ ನಿನಗ...' ಅಂದ. 'ನಾ ಎಲ್ಲೆಂತ ಕ್ಲೀನ್ ಮಾಡಿಕೊಳ್ಳಿ... ಹರ್‍ಗ ಬಚ್ಚಲಕೂಡ ನೆಟ್ಟಗಿಲ್ಲ... ಮನ್ಯಾಗ ಎಲ್ಲೇರ ಮರಿಗಿನಿಂತು ಕ್ಲೀನ್ ಮಾಡಿಕೊಳ್ಳಬೇಕಂದ್ರ ಮನ್ಯಾಗ ಒಂದುಕೋಣಿ ಇಲ್ಲ.. ಮನೆ ಎಂಬುದು ಅಂಗ್ಲಬಂಗ್ಲ ಆಗೈತಿ... ಮನಿತುಂಬಾ ನಿಮ್ಮಪ್ಪ ಹದ್ನಾರು ಊರ್‌ತಿರಿಗಿ ದೇವ್ರುಫೋಟ ಇಟ್ಟಾನ... ಮನ್ಯಾಗ ಯಾರಿಲ್ದಾಗ ಮಾಡಿಕೊಳ್ಳಬೇಕಂದ್ರ ಮನೇಲಿದ್ದ ದೇವ್ರು 'ಇಲ್ಲಿ